CALLING ATTENTION TO MATTERS OF URGENT PUBLIC IMPORTANCE

(i) *re* : Strike by Students of the Siddaganga Institute of Technology, Tumkur.

Sri GATTI CHANDRASHEKAR (Gubbi).—I call the attention of the Hon. Minister for Education to a strike by the students of Siddaganga Institute of Technology, Tumkur.

Sri A. R. BADARINARAYANA (Minister for Education).–Sir, I state as follows :—

In the Magazine 'Science To-day' an article has appeared in which the list of Engineering Colleges offering Degree Courses is shown. In this list, there are a few Engineering Colleges which are not getting any financial assistance from the State or Central Government and in the foot note, it has been indicated that some Colleges in Mysore State are not being given any financial assistance and hence indicated as unapproved institutions. However, they are all recognised Institutions.

2. These unaided Institutions are affiliated to the University of Mysore (Mysore University–2 and Bangalore University–2) and they are giveu affiliation and recognition by the State Government. The Degree awarded by the respective Universities are recognised.

3. The term 'unapproved Colleges' has created some doubts and anxiety in the minds of the students and they were afraid that this would come in their way of employment which was responsible for the strike. It has been explained that the approval of the Institutions for assistance and recognition of the Institutions for the award of Degree are two separate issues. This matter was discussed with the student leaders and they were also convinced and the students have returned to their classes.

re : Taking over Playground for constructing Buildings for the State Home, Hubli

ಶ್ರೀ ಕೆ. ಯಂಕಟಪ್ಪ.—ಹುಬ್ಬಳ್ಳಿಯಲ್ಲಿ ಪ್ರತಿಪ್ರೇಕ್ಷಣ ಗೃಹದ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಸರ್ಕಾರದವರು ಎರಡನೇ ವಾರ್ಡಿನಲ್ಲಿರುವ ಆಟದ ಮೈದಾನವನ್ನು ವಹಿಸಿಕೊಂಡಿರುವ ವಿಚಾರದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಹಾಗೂ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರು ಸಂಬಂಧಪಟ್ಟ ಹೇಳಿಕೆಯನ್ನು ಓದುತ್ತಾರೆ. ಅದರ ಮೇಲೆ ಏನಾದರೂ ವಿವರಣೆಗಳನ್ನು ಕೇಳಿದರೆ ಅದನ್ನು ಹೇಳುವುದಕ್ಕೆ ಅವರಿಗೆ ಅವಕಾಶವಿಲ್ಲದೆ ಇರುವುದರಿಂದ ಸಂಬಂಧಪಟ್ಟ ಮಂತ್ರಿಗಳು ಬಂದನಂತರ ಇದನ್ನು ತೆಗೆದುಕೊಳ್ಳುವುದು ಸೂಕ್ತ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿದ ಪ್ರಶ್ನೆಗೆ ಎಷ್ಟು ಉತ್ತರ ಸಿಕ್ಕುತ್ತದೆ ಅದನ್ನು ಹೇಳುವುದಕ್ಕೆ ಸಾಧ್ಯ. ಆದರೆ ಅಧ್ಯಕ್ಷರು ಅವರ ಇಚ್ಛೆಬಿಂದಂತೆ ಮಾಡಲು ನನ್ನ ಅಭ್ಯಂತರವಿಲ್ಲ.

ಅಧ್ಯಕ್ಷರು.—ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳು ಬಂದನಂತರ ತೆಗೆದು ಕೊಳ್ಳುತ್ತೇನೆ.

Matter under Rule 312 *re* : Statement of some Congress M. Ps. against the Ministry

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕರೆ).—ನಾನು ರೂಲ್ 312 ರ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪಮಾಡಲು ಕಳುಹಿಸಿದ್ದೆ.

ಅಧ್ಯಕ್ಷರು.—ರೂಲ್ 312 ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ಅದನ್ನು ವಾರಕ್ಕೆ ಒಂದು ದಿನ ಅಥವಾ ಎರಡು ದಿನ ತೆಗೆದುಕೊಳ್ಳಬೇಕೆಂದಿದ್ದೇನೆ. ಯಾವ ದಿನ ಅಜೆಂಡಾವಲ್ಲಿ ಹಾಕಲಾಗುತ್ತದೆ ಆ ದಿವಸ ಮಾತ್ರ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಮಂತ್ರಿಗಳು ಇದ್ದಾರೆ. ಅವರಲ್ಲಿ ತಮ್ಮ ಮೂಲಕ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ನಮ್ಮ ರಾಜ್ಯದ ಮಂತ್ರಿ ಮಂಡಲದ ಮೇಲೆ ಪಾರ್ಲಮೆಂಟ್ ಸದಸ್ಯರು ಕೆಲವು ಆರೋಪಣೆಗಳನ್ನು ಪ್ರಧಾನಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆ ಆರೋಪಣೆಗಳೇನು, ಅವುಗಳ ಬಗ್ಗೆ ನಮ್ಮ ಮಂತ್ರಿಮಂಡಲದ ಪ್ರತಿಕ್ರಿಯೆ ಏನು ? ಪಾರ್ಲಿಮೆಂಟ್ ಸದಸ್ಯರು ಡೆಲ್ಲಿಯಿಂದ ಬೆಂಗಳೂರಿಗೆ ಬಂದಮೇಲೆ ಒಬ್ಬಿಬ್ಬರು ಒಂದೊಂದು ರೀತಿಯ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಅವರ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಬಜೆಟ್ ಮೇಲಿನ ಚರ್ಚೆಯಲ್ಲಿ ಬೇಕಾದಷ್ಟು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಇತ್ತೀಚೆಗೆ ಬಂದಿರುವ ಸಮಾಚಾರದ ಪ್ರಕಾರ ಪ್ರಧಾನಿಯವರು ಸಹಿತ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಿವಿ ಮಾತಿನಲ್ಲಿ ಕೆಲವು ಸಚಿವರನ್ನು ತೆಗೆದುಹಾಕಬೇಕು, ಇಲ್ಲದೆ ಇದ್ದರೆ ನಿಮಗೂ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದ್ದಾರೆ. ಸಭೆ ನಡೆಯುವಾಗ ಅವರನ್ನು ತೆಗೆದುಹಾಕಿದರೆ ಪಕ್ಷದಲ್ಲಿ ಒಡಕು ಬರುವ ಸಂಭವವಿದೆ. ಅಧಿವೇಶನ ಮುಗಿದನಂತರ ಪರಿಶೀಲನೆ ಮಾಡೋಣವೆಂದು ಹೇಳಿದ್ದಾರೆಂದು ಸಮಾಚಾರ ಅವರ ಪಕ್ಷದವರಿಂದಲೇ ನಮಗೆ ಬಂದಿದೆ. ಹಾಗೆ ಮಾಡುವುದಾದರೆ ಹೊಸದಾಗಿ ಯಾರನ್ನು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನಮಗೂ ಸ್ವಲ್ಪ ಗೊತ್ತಾಗುವಂತೆ ಹೇಳಲಿ. ಇದು ಪಕ್ಷದ ಪ್ರಶ್ನೆ ಮಾತ್ರವಲ್ಲ ಅವರ ಪಕ್ಷದ ಸಭೆಯಲ್ಲಿ ಗೊಂದಲವಾಗಿ ಎರಡು ಭಾಗವಾಯಿತು ಎಂದೂ ತಿಳಿದು ಬಂದಿದೆ. ಯಾರು ಬಂದರೂ ಚಿಂತೆ ಇಲ್ಲ, ನನ್ನನ್ನು ಅಳ್ಳಾಡಿಸುವುದಕ್ಕೆ ಸಾಧ್ಯವಿಲ್ಲ, ನಾನು ಭದ್ರವಾಗಿದ್ದೇನೆಂದು ಹೇಳುತ್ತಿದ್ದಾರೆಂದು ಕೇಳಿದ್ದೇವೆ. ಈಗಿನ ಮಂತ್ರಿಮಂಡಲದಲ್ಲಿ ನಮಗೆ ಅಪನಂಬಿಕೆ ಬಂದಿದೆ. ಅದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಕಾತುರತೆಯನ್ನು ಹೋಗಲಾಡಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸಾಮಾನ್ಯ ಜನರು ಅಪಾದನೆ ಮಾಡಿದ್ದರೆ ನಾವೇನೂ ಕಾತುರ ಪಡಬೇಕಾಗಿರಲಿಲ್ಲ. ಆದರೆ ರಾಜ್ಯದ ಸಂಸತ್ ಸದಸ್ಯರೇ ಹೇಳಿರಬೇಕಾದರೆ, ಇದು ಪ್ರತಿಯೊಬ್ಬರೂ ಕೂಡ ಚಿಂತೆ ಮಾಡಬೇಕಾದ ಪ್ರಶ್ನೆಯಾಗಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಏನು ಅಭಿಪ್ರಾಯ ತಾಳಿದ್ದಾರೆನ್ನುವುದನ್ನು ಹೇಳಿದರೆ ಅನೇಕ ಅನುಮಾನಗಳು ಬಗೆಹರಿಯುತ್ತವೆ.

2-00 P.M

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಇವರ ಮೇಲೆ ಇಷ್ಟೊಂದು ಅನಪೇಕ್ಷಿತ ಬಹಿರಂಗವಾಗಿ ಬಹಳ ಸಂತೋಷ. ಬಹುಶಃ ನಾನು ಹೇಳಿದರೆ ಶ್ರೀಮಾನ್ ನಾಗರಾಜರವರೂ ಎಲ್ಲರಿಗಿಂತ ಹೆಚ್ಚಾಗಿ ಒಪ್ಪುತ್ತಾರೆಂದು ಭಾವಿಸುತ್ತೇನೆ. ಅದಕ್ಕಾಗಿ ಅವರಿಗೂ ನನ್ನ ಧನ್ಯವಾದಗಳು ನಮ್ಮ ಸದಸ್ಯರುಗಳಿಗೆ ಮಂತ್ರಿಮಂಡಲದಲ್ಲಿ ಭದ್ರತೆ ಇದೆಯೇ ಹೇಗೆ ಎಂದು ಕೇಳುತ್ತಿದ್ದಾರೆ. ಬಹುಶಃ ನಮ್ಮ ಮಂತ್ರಿಮಂಡಲ ಭದ್ರ